ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ಡಿಸೆಂಬರ್ 23, 2015

# ಕ್ರಿಸ್‌ಮಸ್ : ರಾಜ್ಯದ ಕ್ರೈಸ್ತ ಬಾಂಧವರಿಗೆ ಮುಖ್ಯಮಂತ್ರಿ ಶುಭಾಶಯ




**ಬೆಂಗಳೂರು, ಡಿಸೆಂಬರ್ 23 :**

ಏಸು ಕ್ರಿಸ್ತನ ಜನ್ಮದಿನವಾದ ಕ್ರಿಸ್‌ಮಸ್ ಹಬ್ಬದ ಸುಸಂದರ್ಭದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ, ವಿಶೇಷವಾಗಿ ಕ್ರೈಸ್ತ ಬಾಂಧವರಿಗೆ, ಶುಭ ಹಾರೈಸಿದ್ದಾರೆ.

ಏಸು ಎಂಬ ಎರಡಕ್ಷರದ ಪದದಲ್ಲಿ ಆಗಸದಷ್ಟು ಪ್ರೀತಿ, ಸಾಗರದಷ್ಟು ಸೋದರತೆ ಹಾಗೂ ಪರ್ವತದಷ್ಟು ಅನುಕಂಪ ಎಲ್ಲವೂ ಅಡಗಿದೆ.

ಶಾಂತಿಧೂತ ಏಸುವಿನ ಸ್ಮರಣೆಯೇ ಕ್ರಿಸ್‌ಮಸ್‌ಗೆ ಪ್ರೇರಣೆ. ಒಂದೆಡೆ ಸಾಂತಾ ಕ್ಲಾಸ್ ಉಡುಗೊರೆ ಕೊಟ್ಟು ಮಕ್ಕಳಲ್ಲಿ ಪುಳಕ ಸೃಷ್ಟಿಸುತ್ತಾನೆ. ಮತ್ತೊಂದೆಡೆ ಬಣ್ಣದ ಬಣ್ಣದ ದೀಪಗಳು ಮನೆಯ ಅಂಗಳವನ್ನು ಬೆಳಗುತ್ತವೆ. ಮಗದೊಂದೆಡೆ ಬಗೆ ಬಗೆಯ ಕೇಕ್‌ಗಳು ನಾಲಿಗೆಗಳನ್ನು ನಲಿಸುತ್ತವೆ. ಇದೇ ಕ್ರಿಸ್‌ಮಸ್‌ನ ಸಂಭ್ರಮ ಮತ್ತು ಸಡಗರ.

ಕ್ರಿಸ್‌ಮಸ್ ಹಬ್ಬವು ರಾಜ್ಯದ ಎಲ್ಲಾ ಕ್ರೈಸ್ತ ಬಾಂಧವರಿಗೂ ಸಮೃದ್ಧಿ ಹಾಗೂ ಸಂತೃಪ್ತಿ ತರಲಿ ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

**************